## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 08-09-2022

### ಮಾರ್ಕೇಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 66/2022 ಕಲಂ 399, 402 ಐಪಿಸಿ :-

ದಿನಾಂಕ 07-09-2022 ರಂದು ಪಿ.ಐ. ರವರು ಬೀದರ ನಗರ ವೃತ್ತದ ವ್ಯಾಪ್ತಿಯಲ್ಲಿ ಗಸ್ತು ಚೆಕಿಂಗ್ ಕರ್ತವ್ಯ ನಿರ್ವಹಿಸುತ್ತಾ ರಾತ್ರಿ 0100 ಗಂಟೆಯ ಸುಮಾರಿಗೆ ಬೀದರ ಮಾರ್ಕೆಟ ಪೊಲೀಸ್ ಠಾಣಾ ವ್ಯಾಪ್ತಿಯಾದ ಸುಭಾಷ ಚೌಕ ಮಂಗಲಪೇಟ ಕಡೆಗೆ ಬಂದಾಗ  ಬಾತ್ಮಿ ಬಂದಿದೆನAದರೆ, ಬೀದರ ಜಹಿರಾಬಾದ ರೋಡಿಗೆ ಇರುವ ರಿಂಗ್ ರೋಡ್ ಸ್ವಲ್ಪ ಮುಂದೆ ಕೆಲವು ಕಳ್ಳರು ಡಕಾಯಿತಿ ಮಾಡಲು ವಾಹನಗಳನ್ನು ಅಡ್ಡಗಟ್ಟಿ ಲೂಟಿ ಮಾಡಲು ನಿಂತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ರಾತ್ರಿ ಗಸ್ತು ಚಿಕಿಂಗ್ ಕರ್ತವ್ಯದ ಮೇಲಿದ್ದ ಶ್ರೀ ಕಿರಣ ಪಿ.ಎಸ್.ಐ-1 ಮಾರ್ಕೆಟ ಪೊಲೀಸ್ ಠಾಣೆ ಮತ್ತು ಸಿಬ್ಬಂದಿಯೊAದಿಗೆ 0215 ಗಂಟೆಗೆ ಸ್ಥಳಕ್ಕೆ ಹೋಗಿ ಪೊಲೀಸ್  ಜೀಪನ್ನು ಮರೆಯಾಗಿ ನಿಲ್ಲಿಸಿ ನಾವು ಕೆಳಗೆ ಇಳಿದು ಮರೆಯಾಗಿ ನಿಂತು ನೋಡಲು ಚಿಕಪೇಟ ರೋಡಿಗೆ 7 ಜನರು ತಮ್ಮ ಮುಖಗಳಿಗೆ ಮಂಕಿ ಕ್ಯಾಪ ಹಾಕಿಕೊಂಡಿದ್ದು ಹಾಗು ಬಟ್ಟೆ ದಸ್ತಿಯನ್ನು ಕಟ್ಟಿಕೊಂಡಿದ್ದು ಅದರಲ್ಲಿ ಇಬ್ಬರು ತನ್ನ ಕೈಯಲ್ಲಿ ರಾಡು, ಇನ್ನೊಬ್ಬನು ತನ್ನ ಕೈಯಲ್ಲಿ ಬಡಿಗೆಗಳು ಹಾಗು ಇನ್ನೊಬ್ಬನು ಕೈಯಲ್ಲಿ ಹಗ್ಗ ಹಿಡಿದುಕೊಂಡು ನಿಂತಿರುವುದನ್ನು ಖಚಿತ ಪಡಿಸಿಕೊಂಡು  ದಾಳಿ ಮಾಡುವಾಗ ಅವರು ಒಡಲು ಪ್ರುಯತ್ನಿಸುವಾಗ ಅವರಿಗೆ ಅಲ್ಲೆ ಹಿಡಿದುಕೊಂಡು ಸದರಿ ವ್ಯಕ್ತಿಗಳಿಗೆ ತಮ್ಮ ಮುಖಕ್ಕೆ ಹಾಕಿಕೊಂಡ ಮಂಕಿ ಕ್ಯಾಪ ಮತ್ತು ದಸ್ತಿಯನ್ನು ತೆಗೆಯಲು ಹೇಳಿದಾಗ ಸದರಿಯವರು ತಮ್ಮ ತಮ್ಮ ಮುಖಕ್ಕೆ ಹಾಕಿಕೊಂಡ ಮಂಕಿ ಕ್ಯಾಪ ಮತ್ತು ಬಟ್ಟೆ (ದಸ್ತಿ)ಯನ್ನು ತೆಗೆದರು. ನಂತರ ಅವರ ಹೆಸರು ಮತ್ತು ವಿಳಾಸ ವಿಚಾರಿಸಲು 1] ಪವನ ತಂದೆ ಕನ್ನಯ್ಯ ಉಪಾಧ್ಯಾಯ ವಯ 21 ವರ್ಷ ಜಾತಿ ಮಾಂಗರವಾಡಿ ಉ;ಕೂಲಿ ಕೆಲಸ ಸಾ:ಮಲ್ಲಾಪಲ್ಲಿ ಅಫಜಲ ಸಾಗರ ಹೈದ್ರಾಬಾದ. 2) ಧರ್ಮ ತಂದೆ ರಾಮ ಹತ್ತಾಗಡೆ ವಯ 23 ವರ್ಷ ಜಾತಿ ಮಾಂಗರವಾಡಿ ಉ;ಜಿ.ಹೆಚ್.ಎಂ.ಸಿ ಕಾರ್ಮಿಕ ಸಾ:ಯೂಸುಫ ಬಾಬಾ ದರ್ಗಾ ಹತ್ತಿರ ನಾಮಪಲ್ಲಿ ಹೈದ್ರಾಬಾದ. 3) ಕೈಲಾಶ ತಂದೆ ರಾಜ ಕಾಂಬಳೆ ವಯ 19 ವರ್ಷ ಜಾತಿ ಮಾಂಗರವಾಡಿ ಉ;ವಾಟರ ಸಪ್ಲಾಯಿ ಕೆಲಸ ಸಾ:ಸಿತಾರಾಮ ಬಾಗ ಸಾಯಿ ಬಾಬಾ ಹೋಟಲ ಹತ್ತಿರ ಹೈದ್ರಾಬಾದ. 4) ದಶರಥ ತಂದೆ ರಾಮ ಹತ್ತಾಗಡೆ ವಯ 21 ವರ್ಷ ಜಾತಿ ಮಾಂಗರವಾಡಿ ಉ;ಕೂಲಿ ಕೆಲಸ ಸಾ:ಮಲ್ಲಾಪಲ್ಲಿ ಅಫಜಲ ಸಾಗರ ಹೈದ್ರಾಬಾದ 5) ಶಿವಾ ತಂದೆ ರಾಜು ಉಪಾಧ್ಯಾಯ ವಯ 25 ವರ್ಷ ಜಾತಿ ಮಾಂಗರವಾಡಿ ಉ;ಪ್ರಿಂಟಿAಗ ಪ್ರೇಸನಲ್ಲಿ ಕೆಲಸ ಸಾ:ಮಲ್ಲಾಪಲ್ಲಿ ಹೈದ್ರಾಬಾದ. 6) ಆಕಾಶ ತಂದೆ ಅನೀಲ ಕಾಂಬಳೆ ವಯ 21 ವರ್ಷ ಜಾತಿ ಮಾಂಗರವಾಡಿ ಉ;ದ್ವಿಚಕ್ರವಾಹನ ಮೇಕಾನಿಕ ಸಾ:ಅಸೀಫ ನಗರ ಹೈದ್ರಾಬಾದ. 7) ರಾಜೇಶ ತಂದೆ ಗುಂಡಪ್ಪಾ ಹತ್ತಾಗಡೆ ವಯ 40 ವರ್ಷ ಜಾತಿ ಆಟೋ ಚಾಲಕ ಸಾ:ಮಲ್ಲಾಪಲ್ಲಿ ಅಫಜಲ ಸಾಗರ ಹೈದ್ರಾಬಾದ. ಅಂತ ತಿಳಿಸಿರುತ್ತಾನೆ. ಸದರಿಯವರಿಗೆ ಇಲ್ಲಿ ಏಕೆ ನಿಂತಿರುವಿರಿ ಎಂದು ಕೇಳಿದಾಗ ಯಾವುದೇ ಉಪಯುಕ್ತವಾದ ಮಾಹಿತಿ ನೀಡಲಿಲ್ಲಾ. ನಂತರ ಮತ್ತೆ ವಿಚಾರಣೆ ಮಾಡಲಾಗಿ ತಾವು 7 ಜನರು ಸೇರಿ ಇಲ್ಲಿ ಒಬ್ಬ ವ್ಯಕ್ತಿ ನಡೆದುಕೊಂಡು ಹೋಗುವ ವ್ಯಕ್ತಿಗಳಿಗೆ ಮತ್ತು ದ್ವೀಚಕ್ರ ವಾಹನಗಳ ಮೇಲೆ ಒಬ್ಬರು ಹೋಗುವ ಜನರನ್ನು ತಡೆದು ಅವರಿಂದ ನಗನಾಣ್ಯ ದೋಚುವ ಉದ್ದೇಶದಿಂದ ರಾಡ್ ಮತ್ತು ಬಡಿಗೆ ಸಮೇತವಾಗಿ ದರೋಡೆ ಮಾಡುವ ಉದ್ದೇಶದಿಂದ ರೆಡಿಯಾಗಿ ನಿಂತಿದ್ದಾಗಿ ತಿಳಿಸಿದರು. ನಂತರ ಈ ಮೇಲಿನ ವ್ಯಕ್ತಿಗಳ ಕೈಯಲ್ಲಿದ್ದ ವಸ್ತುಗಳು ಪರಿಶೀಲಿಸಲು 1] ಎರಡು ಕಬ್ಬಿಣದ ರಾಡ ಅಂದಾಜು 2 ಫೀಟ ಉದ್ದ  2] ಎರಡು ಬಡಿಗೆ ಅಂದಾಜು 2 ಫೀಟ್ ಉದ್ದ 3] ಎರಡು ಹಗ್ಗ ಒಂದು ಅಂದಾಜು 50 ಫೀಟ ಉದ್ದ ಹಾಗು ಇನ್ನೊಂದು ಅಂದಾಜು 40 ಫೀಟ್ ಉದ್ದ ಇದ್ದು ಇದರ ಅ.ಕಿ. 300/- ರೂ ಹಾಗು 4] ಒಂದು ಕ್ಯಾರಿಬ್ಯಾಗನಲ್ಲಿ ಖಾರದ ಪುಡಿ ಅಂದಾಜು 500 ಗ್ರಾಂ ಇದ್ದು ಅ.ಕಿ. 50/- ರೂ ಆಗಬಹುದು,  ಅವರನ್ನ ದಸ್ತಗಿರಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಬಸವಕಲ್ಯಾಣ ಗ್ರಾಮೀಣ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 107/2022 ಕಲಂ 78(3) ಕೆಪಿ ಕಾಯ್ದೆ :-

ಇಂದು ದಿನಾಂಕ 07/09/2022 ರಂದು 15-30 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಮಾಹಿತಿ ಬಂದಿದೇನೆAದರೆ ಯೆರಂಡಗಿ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಒಬ್ಬನು ಸಾರ್ವಜನಿಕ ಸ್ಥಳದಲ್ಲಿ ಕುಳಿತು ಸಾರ್ವಜನಿಕರಿಂದ ಹಣವನ್ನು ಪಡೆದುಕೊಂಡು ಮಟಕಾ ನಂಬರ ಚೀಟಿ ಬರೆದು ಕೊಡುತಿದ್ದಾನೆ, ಅಂತಾ ಮಾಹಿತಿ ಮೇರೆಗೆ ಸಿಬ್ಬಂದಿಯೊAದಿಗೆ ಯೆರಂಡಗಿ ಗ್ರಾಮದ ಬಸ್ಸ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿ ಹೋಗಿ ಮರೆಯಲ್ಲಿ ನಿಂತು ನೋಡಲು ಬಸ್ಸ ನಿಲ್ದಾಣದ ಹತ್ತಿರ ಒಬ್ಬನು ಸಾರ್ವಜನಿಕ ಸ್ಥಳದಲ್ಲಿ ಕುಳಿತು 1 ರೂ ಗೆ 80 ರೂಪಾಯಿ ಕೊಡುತ್ತೇನೆ ಅಂತಾ ಜೋರಾಗಿ ಕೂಗಿ ಕೂಗಿ ಸಾರ್ವಜನರಿಗೆ ಕರೆದು ಸಾರ್ವಜನಕರಿಂದ ಹಣವನ್ನು ಪಡೆದುಕೊಂಡು ಮಟಕಾ ನಂಬರಿನ ಚೀಟಿ ಬರೆದು ಕೊಡುವಾಗ

ಖಚಿತಪಡಿಸಿಕೊಂಡು 17:00 ಗಂಟೆಗೆ ಸದರಿಯವನ ಮೇಲೆ ದಾಳಿ ಮಾಡಿ ಹಿಡಿದು ವಿಚಾರಿಸಲು ತನ್ನ ಹೆಸರು ವಿಜಯಕುಮಾರ ತಂದೆ ಶರಣಪ್ಪಾ ನೀಲೆ ವಯ:45 ವರ್ಷ ಜಾತಿ:ಎಸ,ಟಿ ಕೋಳಿ ಉ:ಕೂಲಿಕೆಲಸ ಸಾ:ಯೆರಂಡಗಿ ಅಂತಾ ತಿಳಸಿದನು, ನಂತರ ಸದರಿಯವನ ಅಂಗ ಜಡ್ತಿ ಮಾಡಲು ಇತನ ಹತ್ತಿರ 1] ನಗದು ಹಣ 1850/- ರೂಪಾಯಿ 2] ಒಂದು ಮಟಕಾ ನಂಬರ ಬರೆದ ಚೀಟಿ 3] ಒಂದು ಬಾಲ ಪೆನ್ನು ಸಿಕ್ಕಿದ್ದು ಆತನ ಹತ್ತಿರ ಸಿಕ್ಕ ನಗದು ಹಣ, ಮಟಕಾ ನಂಬರ ಬರೆದ ಚೀಟಿ ಹಾಗೂ ಒಂದು ಬಾಲ ಪೆನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಸಂತಪೂರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 91/2022 ಕಲಂ 379 ಐಪಿಸಿ :-

ದಿನಾಂಕ 07/09/2022 ರಂದು 1800 ಗಂಟೆಗೆ ಶ್ರೀ ಶಿವಶಂಕರ ತಂದೆ ವೈಜಿನಾಥ ಚಳಕಾಪೂರೆ ವ. 35 ವರ್ಷ ಉ/ ಔರಾದ ಸೋಲಾರ ಪ್ರವೇಟ್ ಲಿಮಿಟೆಡ್ ಜೋನೆಕೇರಿ ಯಲ್ಲಿ ವಿದ್ಯೂತ ಘಟಕ ವ್ಯವಸ್ಥಾಪಕರು ಸಾ ಶಿವನಗರ ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ಸಲ್ಲಸಿದರ ನೋಡಲಾಗಿ ಸುಮಾರು 6 ವರ್ಷದಿಂದ ಔರಾದ ಸೋಲಾರ ಪ್ರವೇಟ್ ಲಿಮಿಟೆಡ್ ಜೋನೆಕೇರಿ ಯಲ್ಲಿ ವಿದ್ಯೂತ ಘಟಕ ವ್ಯವಸ್ಥಾಪಕರು ಅಂತ ಕೇಲಸ ಮಾಡಿಕೊಂಡಿದ್ದು ಹೀಗಿರುವಾಗ ದಿನಾಂಕ 04/09/2022 ರಂದು ಬೆಳ್ಳಿಗ್ಗೆ 1100 ಗಂಟೆಯ ಸುಮಾರಿಗೆ ಸೋಲಾರ ಘಟಕಕ್ಕೆ ಬಂದು ಪ್ರತಿದಿನದಂತೆ ವಿಧ್ಯತು ರವಾನಿಸಿದ ಮಟ್ಟವನು ವಿಕ್ಷಿಸಿ ನೋಡಿದಾಗ ವಿಧ್ಯತ ರವಾನೆಯಲ್ಲಿ ವ್ಯತ್ಯಾಸ ಕಂಡು ಬಂದರಿAದ ಅರುಣಪಾಲ ಸುಪ್ರಾಯಜರ್ ಮತ್ತು ಬಸವಕಿರಣ ಜೂನಿಯರ್ ಇಂಜಿನಿಯರಿAಗ ಮತ್ತು ಸಾಹಾಯಕ ಮೀಥುನ ಕೂಡಿ ಸೋಲಾರ ಘಟಕವನು ಪರಿಶಿಲಿಸಿದಾಗ. ಘಟಕದ ಪಶ್ಚಿಮದಿಕ್ಕಿಗೆ ಕೋನೆಯಲ್ಲಿರುವ “ ರೋ” ಗಳ ಕೇಳಗೆ ವಿದ್ಯೂತ ರವಾನೆಯಾಗಲು ಅಳವಡಿಸಿದ ಡಿ,ಸಿ ಕೇಬಲ್ 6 ಎಮ್ ಎಮ್ ನ್ನು ಒಟ್ಟು 6 ರೋ ಗಳಿಂದ ಸುಮಾರು 200 ಮೀಟರಷ್ಟು ಕೇಬಲನು ದಿನಾಂಕ 02/09/2022 ರಂದು ಸಾಯಂಕಾಲ 6.30 ಗಂಟೆಯಿAದ ದಿನಾಂಕ 04/09/2022 ರಂದು ಬೆಳ್ಳಿಗ್ಗೆ 11.00 ಗಂಟೆಯ ಮಧ್ಯ ಅವಧಿಯಲ್ಲಿ ಡಿ,ಸಿ ಕೇಬಲನು 200 ಮೀಟರ್ ಅಂದಾಜು ಬೆಲೆ 15000-/ ಆಗಬಹುದು ಇದನು ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.